2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ **10/2021**</u>

| | | |
|---|---|---|
| ಸಾಕ್ಷಿದಾರರ ಹೆಸರು | - ಡಾ. ಚಿದಾನಂದ ಪಿ.ಎಸ್. | ಪಿಡಬ್ಲ್ಯೂ - 06 |
| ತಂದೆಯ ಹೆಸರು | - ಸೀತಾರಾಮ್ | ಸಿಡಬ್ಲ್ಯೂ - 29 |
| ವಯಸ್ಸು | - 45 ವರ್ಷ | |
| ಉದ್ಯೋಗ | - ಅಸೋಸಿಯೇಟ್ ಪ್ರೊಫೆಸರ್, ಫೊರೆನ್ಸಿಕ್‌ವಿಭಾಗ, ಸಿಮ್ಸ್ ಶಿವಮೊಗ್ಗ | |
| ವಾಸ ಸ್ಥಳ | - ಶಿವಮೊಗ್ಗ | |

ದಿನಾಂಕಃ 24-06-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ ಮಾನ್ಯ ಪ್ರಭಾರ ಪಿ.ಪಿ. ರವರಿಂದ -</u>

1. ನಾನು 2008 ರಿಂದ ಸಿಮ್ಸ್ ಆಸ್ಪತ್ರೆ ಶಿವಮೊಗ್ಗದಲ್ಲಿ ಅಸೋಸಿಯೇಟ್ ಪ್ರೊಫೆಸರ್ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ 23.10.2019 ರಂದು ಹಿರಿಯ ಸಹಾಯ ಕಮೀಷನರ್, ತರೀಕೆರೆ ಇವರು ಮನವಿಯನ್ನು ಸಲ್ಲಿಸಿ ನನಗೆ ಗೌರಾಪುರ ಕಬರಸ್ತಾನದಲ್ಲಿ ದಿಃ 02.11.2019 ರಂದು ಬೆಳಿಗ್ಗೆ ಹಾಜರಿರುವಂತೆ ತಿಳಿಸಿದ್ದರು. ಸದರಿ ಸ್ಥಳದಲ್ಲಿ ಶವ ಹೂತಿರುವುದನ್ನು ಹೊರತೆಗೆದು ಶವ ಪರೀಕ್ಷೆ ನಡೆಸಬೇಕಾಗಿದೆ ಎಂದು ತಿಳಿಸಿದ್ದರು.

3. ದಿಃ 02.11.2019 ರಂದು ಬೆಳಿಗಿನ ಸಮಯದಲ್ಲಿ ಅಜ್ಜಂಪುರ ಪೋಲೀಸರು ಸದರಿ ಶವ ಹೂತ ಸ್ಥಳಕ್ಕೆ ಕರೆದುಕೊಂಡು ಹೋದರು. ಶವ ಹೂತ ಸ್ಥಳದಲ್ಲಿ ಸಹಾಯ ಕಮೀಷನರ್, ತರೀಕೆರೆ, ಡಿ.ವೈ.ಎಸ್.ಪಿ., ತರೀಕೆರೆ ಹಾಗೂ ಮೃತಳ ಸಂಬಂಧಿಕರು ಹಾಜರಿದ್ದರು.

4. ಗೌರಾಪುರ ಕಬರಸ್ಥಾನದಲ್ಲಿ ಸುಮಾರು 4 ಅಡಿ ಆಳದಲ್ಲಿ ಹೂತ ಮೃತದೇಹವೊಂದನ್ನು ಪೋಲೀಸರು ಹೊರತೆಗೆಸುತ್ತಿದ್ದರು. ಅಲ್ಲಿನ ಮಣ್ಣು ತೇವಾಂಶದಿಂದ ಕೂಡಿತ್ತು. ಸ್ಥಳದಲ್ಲಿ ಹೊರತೆಗೆಯಲಾದ ಶವದ ಪರೀಕ್ಷೆ ನಡೆಸುವಂತೆ ಸಹಾಯ ಕಮೀಷನರ್, ತರೀಕೆರೆ ಇವರು ಮದ್ಯಾಹ್ನ 2.00 ಗಂಟೆ ಸಮಯಕ್ಕೆ ನನಗೆ ಕೋರಿಕೆ ಪತ್ರ ನೀಡಿದರು.

5. ಮೃತದೇಹವನ್ನು ಅದೇ ಸ್ಥಳದಲ್ಲಿ ಮದ್ಯಾಹ್ನ 2.00 ರಿಂದ 3.20 ರವರ ನಡುವೆ ಪರೀಕ್ಷೆ ನಡೆಸಿದ್ದೇನೆ. ಮೃತದೇಹವನ್ನು ಬಿಳಿ ಬಣ್ಣದ ಮಣ್ಣಿನಿಂದ ಕೂಡಿದ ಬಟ್ಟೆಯಲ್ಲಿ ಸುತ್ತಲಾಗಿತ್ತು. ಬಟ್ಟೆಯನ್ನು ತೆಗೆದು ನೋಡಲಾಗಿ ಮೃತದೇಹವು 155 ಸೆ.ಮಿ ಉದ್ದ ಸಾದಾರಣ ಮೈಕಟ್ಟಿನ ಮಹಿಳೆಯದಾಗಿತ್ತು. ಮರಣಾ ನಂತರ ಸ್ನಾಯು ಸೆಟೆತ ದೇಹದ ಎಲ್ಲಾ ಭಾಗಗಳಿಂದ ಹೋಗಿತ್ತು. ಮೃತದೇಹವು ಕೊಳೆತಿದ್ದು, ಬಣ್ಣ ಬದಲಾಗಿದ್ದು ಕೆಟ್ಟ ವಾಸನೆ ಬರುತ್ತಿತ್ತು. ಮೃತದೇಹದ ಮೇಲೆ ಅಲ್ಲಲ್ಲಿ ಮಣ್ಣು ಇದ್ದು ಮರಣಾನಂತರ ಚರ್ಮ ಸುಲಿಯುವಿಕೆ ದೇಹದ ಎಲ್ಲಾ ಭಾಗಗಳಲ್ಲಿ ಇದ್ದು ಹೊರಚರ್ಮ ಸುಲಿದಿದ್ದರಿಂದ ಒಳಗಿನ ಮೃದುವಾದ ಚರ್ಮ ಕಾಣುತ್ತಿತ್ತು. ತಲೆಯ ಕೂದಲು ಹಾಗೂ ಉಗುರುಗಳು ಮುಟ್ಟಿದರೆ ಉದುರುವ ಸ್ಥಿತಿಯಲ್ಲಿದ್ದವು.

6. ಮೃತದೇಹದ ಮೇಲೆ ಕೆಳಕಾಣಿಸಿದ ಎರಡು ಗಾಯಗಳು ಇದ್ದವು.

a. Contused abrasion measuring 4cm x 2 cm is present over left side of lower part of face at the left angle of lower jaw.

b. An area of brownish black discoloration measuring 8cm x 1cm is present over front and right side of middle of neck, placed 6.5 cm below the chin.

7. On internal examination on further dissection of neck, it is observed that, there is a pale area over inner aspect of right side of neck correspondence to injury NO.2 blood effusion measuring 5cm x 4cm is present over left side of upper part of neck. Thyroid cartilage and hyoid bone are intact.

8. All the internal organs were discoloured, soften and greasy to touch.

9. Stomach was empty.

10. I have collected the following samples:

1. Stomach and its contents, Portions of small intestine with preservatives.

2. Piece of liver, half of each Kidney with preservatives.

3. Blood stained fluid in sodium fluoride.

4. Preservative used saturated solution of

sodium chloride.

5. Soil from the grave.

6. Soil away from the grave Control sample.

7. Sternum bone.

11. Articles 1 to 6 to be sent to Toxicology section for Cheminal analysist and article 7 to Biology section for Diatoms.

12. Skin from the neck injury in formalin is sent to Department of pathology for Histo pathological examination.

13. All the injurties were antymortem in nature. Approximate time since death is 1-3 months commencement prior to atopcy.

14. ಮೇಲೆ ಹೇಳಿದಂತ ಸಂಗ್ರಹಿಸಲಾದವುಗಳನ್ನು ನ್ಯಾಯ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲು ತಿಳಿಸಿರುತ್ತೇನೆ.

15. ನಾನು ಮರಣೋತ್ತರ ಪರೀಕ್ಷೆ ನಡೆಸಿದ ವರದಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.19 ಎಂದು ಸಾಕ್ಷಿಯ ಸಹಿಯನ್ನು ನಿಪಿ.19(ಎ) ಎಂದು ಗುರುತಿಸಲಾಯಿತು.

16. ದಿಃ 27.01.2020 ರಂದು ಡಿವೈಎಸ್.ಪಿ., ತರೀಕೆರೆ ರವರಿಂದ ಮನವಿ ಜೊತೆಗೆ ಎರಡು ನ್ಯಾಯ ವಿಜ್ಞಾನ ಪ್ರಯೋಗಾಲ ಯದ ವರದಿಗಳನ್ನು ಸ್ವೀಕರಿಸಿದ್ದೇನೆ. ಸದರಿ ನ್ಯಾಯ ವಿಜ್ಞಾನ

ಪ್ರಯೋಗಾಲಯದ ವರದಿಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ನಿಪಿ.20 ಮತ್ತು 21 ಎಂದು ಸಾಕ್ಷಿಯ ಸಹಿಯನ್ನು ನಿಪಿ.20(ಎ) ಮತ್ತು 21(ಎ) ಎಂದು ಗುರುತಿಸಲಾಯಿತು.

17. ನಾನು ನ್ಯಾಯ ವಿಜ್ಞಾನ ಪ್ರಯೋಗಾಲಯದ ವರದಿ ಮತ್ತು ಪಿಎಂ. ವರದಿ ಆಧರಿಸಿ ನನ್ನ ಅಂತಿಮ ಅಭಿಪ್ರಾಯವನ್ನು ಈ ಕೆಳಕಂಡಂತೆ ನೀಡಿದ್ದೇನೆ.

After perusal of post mortem report, chemical analysis report, Diatom test report and histopathological examination report, I am of the opinion that the death is Highly likely to be due to effect of injuries sustained to Fact and Neck.

18. ನನ್ನ ಅಂತಿಮ ಅಭಿಪ್ರಾಯವನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.22 ಎಂದು ಸಾಕ್ಷಿಯ ಸಹಿಯನ್ನು ನಿಪಿ.22(ಎ) ಎಂದು ಗುರುತಿಸಲಾಯಿತು.

19. ದಿಃ 24.02.2020 ರಂದು ಡಿವೈಎಸ್.ಪಿ, ತರೀಕೆರೆ ಇವರು ಮನವಿ ಸಲ್ಲಿಸಿ ಸದರಿ ಪ್ರಕರಣದ ಪಿರ್ಯಾದುದಾರರು ಪಿರ್ಯಾದಿನಲ್ಲಿ ಆರೋಪಿ ಮೃತಳಿಗೆ ಹೊಡೆದು ಕೊಲೆ ಮಾಡಿ ನಂತರ ಸೀರೆಯನ್ನು ಕುತ್ತಿಗೆಗೆ ಬಿಗಿದು ನೇಣುಹಾಕಿರುತ್ತಾರೆ ಇತ್ಯಾದಿಯಾಗಿ ಆಪಾದಿಸಿದ್ದು ಆದ್ದರಿಂದ ಮೃತಳ ಕುತ್ತಿಗೆಯಲ್ಲಿ ಲೀಗೆಚರ್ ಮಾರ್ಕ ಇರುವ ಬಗ್ಗೆ ಅಭಿಪ್ರಾಯ ಕೋರಿದ್ದರು. ಸದರಿ ಮನವಿಯನ್ನು ನಿಪಿ.23 ಎಂದು ಸಾಕ್ಷಿಯ ಸಹಿಯನ್ನು ನಿಪಿ.23(ಎ) ಎಂದು ಗುರುತಿಸಲಾಯಿತು.

20. ನಾನು ಈ ಬಗ್ಗೆ ಮೇಲೆ ಹೇಳಿದ ಮನವಿಗೆ ಈ ಕೆಳಗಿನಂತೆ ದಿಃ 26.02.2020 ರಂದು ಅಭಿಪ್ರಾಯ ನೀಡಿರುತ್ತೇನೆ.

21. After perusal of your letter, Post mortem report and final opinion report. I am of the opinion that, a typical ligature mark could not be appreciated in this case however the possibility of production of injuries mentioned in the report by the manner cannot be completely ruled out.

22. ನಾನು ಮೇಲಿನಂತೆ ನೀಡಿದ ಅಭಿಪ್ರಾಯವನ್ನು ಈಗ ನೋಡುತ್ತಿದ್ದು ಅದನ್ನು ನಿಪಿ.24 ಎಂದು ಸಾಕ್ಷಿಯ ಸಹಿಯನ್ನು ನಿಪಿ.24(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು ಶ್ರೀ.ಎನ್.ಹೆಚ್.ವೈ. ವಕೀಲರಿಂದ – ಆರೋಪಿ ಪರವಾಗಿ</u>

23. ನಾನು ಗೌರಾಪುರ ಸ್ಮಶಾನಕ್ಕೆ ಬೇಟಿ ನೀಡಿದಾಗ ಶವ ಹೂತಿರುವ ಸ್ಥಳದಲ್ಲಿ ಮಣ್ಣು ಅಗೆಯುತ್ತಿದ್ದರು.

24. ಮೃತದೇಹ ಸಾಮಾನ್ಯವಾಗಿ ವಾತಾವರಣದಲ್ಲಿದ್ದಾಗ 24 ಗಂಟೆಗಳ ನಂತರ ಕೊಳೆಯಲು ಪ್ರಾರಂಭವಾಗುತ್ತದೆ ಎಂದರೆ ನಿಜ. ಹೂತಿಟ್ಟ ದೇಹ 1 ರಿಂದ 3 ತಿಂಗಳ ಅವಧಿಯಲ್ಲಿ ಕ್ರಿಮಿಕೀಟಗಳು ತಿಂದು ದೇಹದಲ್ಲಿ ರಂಧ್ರಗಳಾಗುವ ಸಾದ್ಯತೆ ಇದೆ ಎಂದರೆ ಸರಿಯಲ್ಲ. ವ್ಯಕ್ತಿ ಮರಣಹೊಂದಿ 1 ರಿಂದ 3 ತಿಂಗಳ ಅವಧಿ ಕಳೆದ ಸಂದರ್ಬದಲ್ಲಿ ಹೂತಿರುವ ಮೃತದೇಹದದಲ್ಲಿ ಆಗಿರುವ ಗಾಯಗಳನ್ನು ಪರೀಕ್ಷಿಸಿ ಆ ಗಾಯಗಳು ಮರಣಪೂರ್ವ ಗಾಯಗಳೆ ಅಥವ ಮರಣಾನಂತರದ ಗಾಯಗಳೇ ಎಂದು ಕಂಡು ಹಿಡಿಯಲು

ಸಾಧ್ಯವಿಲ್ಲ ಎಂದರೆ ಸರಿಯಲ್ಲ.

25. ನಾನು ಗೌರಾಪುರ ಸ್ಮಶಾನದಲ್ಲಿ ಶವ ಪರೀಕ್ಷೆ ನಡೆಸಿದ್ದೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ.19 ರಲ್ಲಿ ಹೇಳಿದಂತೆ ಯಾವುದೇ ವಸ್ತುವನ್ನು ಸಂಗ್ರಹಿಸಿ ನ್ಯಾಯ ವಿಜ್ಞಾನದ ಪ್ರಯೋಗಾಲಯದ ಪರೀಕ್ಷೆಗೆ ಒಳಪಡಿಸಿಲ್ಲ ಎಂದರೆ ಸರಿಯಲ್ಲ. ಪೋಲೀಸರ ಕೋರಿಕೆ ಮೇರೆಗೆ ಸುಳ್ಳು ಪ್ರಮಾಣಪತ್ರ ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಉಪ ವಿಭಾಗಾಧಿಕಾರಿಗಳು ನಾನು ಹೇಳಿದಂತೆ ಯಾವುದೇ ಮನವಿ ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ</u>

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.
ಸಹಿ/-
(ಮಂಜುನಾಥ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ